ಓಎಸ್ 80/2023 ಡಿಡಬ್ಲ್ಯೂ 1 ರವಿಕುಮಾರ್

ದಿನಾಂಕ 04.11.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ ವಿ.ಎಸ್. ವಕೀಲರಿಂದಃ**

ನಾನು 1 ರಿಂದ ಎಸ್.ಎಸ್.ಎಲ್.ಸಿ. ವರೆಗೆ ಎರಗನ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎರಗನಹಳ್ಳಿಯಲ್ಲಿ ಅಜ್ಜಿ ಮನೆಯಲ್ಲಿ ವಾಸವಾಗಿದ್ದೆ. ನಾನು ಬೊಂತಗಳ್ಳಿಗೆ 1998 ರಲ್ಲಿ ಬಂದಿರುತ್ತೇನೆ. ನಾನು ಬೊಂತಗಳ್ಳಿಯಲ್ಲಿಯೇ ಹುಟ್ಟಿದ್ದು , ಎರಗನಹಳ್ಳಿಯಲ್ಲಿ ಅಜ್ಜಿಯ ಮನೆ ಇರುವುದರಿಂದ ಅಲ್ಲಿ ಶಾಲೆಗೆ ಸೇರಿಸಿದ್ದರು. ತಾಯಿಯೂ ಸಹ ಎರಗನಹಳ್ಳಿಯಲ್ಲಿ ವಾಸವಾಗಿದ್ದರು. ನನ್ನ ತಂದೆಯ ಹೆಸರು ಮಂಚಯ್ಯ, ಅವರು ಬೊಂತಗಳ್ಳಿ ಮತ್ತು ಎರಗನಹಳ್ಳಿಯಲ್ಲಿ ವಾಸವಾಗಿದ್ದರು. ಅವರು ಕೆ.ಇ.ಬಿ.ಯಲ್ಲಿ ಕೆಲಸದಲ್ಲಿದ್ದರು.

2. ವಾದಿಯು ನನ್ನ ದೊಡ್ಡಪ್ಪನ ಮಗಳಿದ್ದು, ನನಗೆ ಅಕ್ಕನಾಗಬೇಕು. ನಮ್ಮ ತಂದೆ ಅಣ್ಣ ತಮ್ಮಂದಿರು ಕೊಮ್ರಯ್ಯ , ನಿಂಗಯ್ಯ ಮತ್ತು ಮಂಚಯ್ಯ ಎಂದು ಮೂರು ಜನ ಸಹೋದರರಿದ್ದರು. ನನ್ನ ತಾಯಿ ಮತ್ತು ನನ್ನ ತಂದೆಗೂ ಹೊಂದಾಣಿಕೆ ಇಲ್ಲದೇ ಇದ್ದುದರಿಂದ ನನ್ನ ತಂದೆ ಬೊಂತಗಳ್ಳಿಯಲ್ಲಿ, ತಾಯಿ ಎರಗನಹಳ್ಳಿಯಲ್ಲಿ ವಾಸವಾಗಿದ್ದರು. ಅದಕ್ಕೆ ನನ್ನ ತಾಯಿ ನಮ್ಮ ತಂದೆಯ ಮೇಲೆ ಜೀವನಾಂಶದ ಕೇಸನ್ನು ಹಾಕಿದ್ದರು. ಆ ಕಾರಣಕ್ಕಾಗಿ ಬೊಂತಗಳ್ಳಿಯಲ್ಲಿ ತಂದೆಯೊಂದಿಗೆ 1998 ರಲ್ಲಿ ಬಂದಾಗ ವಾಸವಾಗಿರಲಿಲ್ಲ ಎಂದರೆ ಸುಳ್ಳು. ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ಮಧ್ಯೆ ವಿಭಾಗ ಆಗಿ ಹೋಗಿತ್ತು ಎಂದರೆ ಸಾಕ್ಷಿಯು 1998 ರ ನಂತರ ವಿಭಾಗ ಆಯಿತು ಎಂದು ನುಡಿಯುತ್ತಾರೆ. ವಿಭಾಗದ ಪ್ರಕಾರ ನನ್ನ ತಂದೆಗೂ ಸಹ ಆಸ್ತಿ ಬಂದಿತ್ತು. ವಿಭಾಗ ಆದ ನಂತರ ಬಂದ ಆಸ್ತಿಗಳು ಈಗಲೂ ಸಹ ನನ್ನ ಹೆಸರಿನಲ್ಲಿರುತ್ತದೆ. ವಿಭಾಗದ ನಂತರ ಬಂದ ಆಸ್ತಿಗಳನ್ನು ತಂದೆಯ ಮರಣಾನಂತರವೂ ಸಹ ನಾನೇ ಅನುಭವಿಸಿಕೊಂಡು ಬಂದಿರುತ್ತೇನೆ.

3. ದಾವಾ ಆಸ್ತಿಯನ್ನು ವಾದಿಯು ದಿನಾಂದ 31.05.2002 ರಂದು ನೋಂದಾಯಿತ ಕ್ರಯ ಪತ್ರದ ಮುಖಾಂತರ ಚಿಕ್ಕೇಗೌಡ ಉರುಫ್ ಸಪ್ಪೇಗೌಡ ಎನ್ನುವವರಿಂದ

ಖರೀದಿಸಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಮತ್ತು ವಾದಿಯ ತಂದೆ ಇಬ್ಬರೂ ಸೇರಿ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ವಾದಿಯ ತಂದೆ ಸೇರಿ ವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ಖರೀದಿಸಿದ್ದರು ಎಂದು ಕ್ರಯಪತ್ರದಲ್ಲಿ ಎಲ್ಲಿಯೂ ಸಹ ಒಕ್ಕಣಿಕೆಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ ನನ್ನ ಹೆಸರಿಗೆ ಯಾವುದೇ ಜಮೀನು ಇಲ್ಲದೇ ಇದ್ದುದರಿಂದ ತುಂಡು ಭೂಮಿ ಕಾಯಿದೆ ಇದ್ದುದರಿಂದ ವಾದಿಯ ಹೆಸರಿಗೆ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರಕ್ಕೆ ನನ್ನ ತಂದೆಯಾಗಲೀ ವಾದಿಯ ತಂದೆಯಾಗಲೀ ಸಾಕ್ಷಿದಾರರಲ್ಲ. ಆ ರೀತಿ ನನ್ನ ತಂದೆ ಮತ್ತು ದೊಡ್ಡಪ್ಪ ವಾದಿಯ ಹೆಸರಿಗೆ ಕ್ರಯಪತ್ರ ಮಾಡಲು ಮಾತುಕತೆ ಆದ ಬಗ್ಗೆ ಯಾವುದೇ ದಾಖಲೆ ಇಲ್ಲ. ಆ ರೀತಿ ಯಾವುದೇ ಮಾತುಕತೆಯಾಗಿರಲಿಲ್ಲ ಮತ್ತು ವಾದಿಯು ತನ್ನ ಸ್ವಂತ ಹಣದಿಂದ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ಯಾವುದೇ ಆಸ್ತಿಯನ್ನು ಖರೀದಿಸಬೇಕಾದರೆ ವ್ಯವಸಾಯಗಾರರ ಕುಟುಂಬದ ಪ್ರಮಾಣಪತ್ರ ಇದ್ದರೆ ಸಾಕು ಎಂದರೆ ಸುಳ್ಳು.

4. ವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ನಂತರ ಕ್ರಯಪತ್ರದಂತೆ ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿ ಈಗಲೂ ಸಹ ಅವರ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸರಿ. ದಾವಾ ಆಸ್ತಿಯು ವ್ಯವಸಾಯದ ಭೂಮಿ ಎಂದರೆ ಸಾಕ್ಷಿಯು ಹಿತ್ತಲು ಭೂಮಿ ಇದೆ ಎಂದು ನುಡಿಯುತ್ತಾರೆ. ವ್ಯವಸಾಯದ ಭೂಮಿ ಆಗಿದ್ದುದರಿಂದಲೇ ವಾದಿಯ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸಾಕ್ಷಿಯು ಇರಬಹುದೆಂದು ನುಡಿಯುತ್ತಾರೆ. ಭೂಮಿಯಲ್ಲಿ ಬೆಳೆದ ಉತ್ಪನ್ನಗಳನ್ನು ಶೇಖರಣೆ ಮಾಡಲು ದಾವಾ ಆಸ್ತಿಯಲ್ಲಿ ಎಂದು ಮನೆಯನ್ನು ಕಟ್ಟಿದ್ದರು ಎಂದರೆ ಸುಳ್ಳು. 1998 ರಲ್ಲಿ ಬೊಂತಗಳ್ಳಿಗೆ ಬಂದಾಗ ಸಣ್ಣಯ್ಯ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದೆ ಎಂದರೆ ಸುಳ್ಳು. ನಾನು 2001 ರಿಂದ 2006 ರವರೆಗೆ ಸಣ್ಣಯ್ಯನವರ ಮನೆಯಲ್ಲಿ ಬಾಡಿಗೆಗೆ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯ ಮದುವೆಯು 1990-92 ರ ಒಳಗಡೆ ಆಗಿರುತ್ತದೆ. ನಾನು ವಾದಿಯ ಅಕ್ಕನ ಮಗಳನ್ನು ಮದುವೆಯಾಗಿದ್ದುದರಿಂದ , ನಾನು ಬೇರೆಯವರ ಮನೆಯಲ್ಲಿ ಬಾಡಿಗೆಗೆ ಇದ್ದುದರಿಂದ ವಾದಿ ದಾವಾ ಆಸ್ತಿಯಲ್ಲಿ ಕಟ್ಟಿದ್ದ ಮನೆಯನ್ನು ಮಾನವೀಯತೆಯ ದೃಷ್ಟಿಯಿಂದ ನನಗೆ ವಾಸ ಮಾಡಲು ಬಿಟ್ಟು ಕೊಟ್ಟಿದ್ದರು ಎಂದರೆ ಸುಳ್ಳು. ನಾನು

ಸದರಿ ಮನೆಗೆ ವಿದ್ಯುತ್ ಸಂಪರ್ಕ, ನೀಡಿನ ಸಂಪರ್ಕವನ್ನು ವಾದಿಯ ಹೆಸರಿನಲ್ಲಿ ಮಾಡಿಸಿಕೊಡುತ್ತೇನೆ ಎಂದು ಅವರಿಂದ ಹಣ ಪಡೆದು ಅಕ್ರಮವಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನಿಡಿ 1 ರಿಂದ 4 ನ್ನು ಮಾಡಿಸಿಕೊಳ್ಳಲು ಚಿಕ್ಕತಾಯಮ್ಮರವರಿಂದ ನನ್ನ ತಾಯಿ, ನನ್ನ ದೊಡ್ಡಪ್ಪ ಹಾಗೂ ನನ್ನ ತಂದೆ ಸಹಿ ಮಾಡಿಸಿಕೊಂಡಿರುವ ಒಂದು ಪತ್ರ, ನನ್ನ ದೊಡ್ಡಪ್ಪ ಅಳತೆ ಮಾಡಿಸಲು ದುಡ್ಡು ಕಟ್ಟಿದ್ದರು, ಆ ಬಗ್ಗೆ ಸರ್ವೆ ಸ್ಕೆಚ್ ಗಳನ್ನು ಪಂಚಾಯಿತಿಗೆ ಕೊಟ್ಟಿದ್ದೆ. ನನ್ನ ದೊಡ್ಡಪ್ಪನೇ ನನ ಹೆಸರಿಗೆ ದಾವಾ ಆಸ್ತಿಯಲ್ಲಿ ಒಂದೂವರೆ ಗುಂಟೆ ಜಮೀನನ್ನು ಖಾತೆ ಮಾಡಿಸಿಕೊಟ್ಟಿರುತ್ತಾರೆ. ಆ ಕಾಲಕ್ಕೆ ನನ್ನ ದೊಡ್ಡಪ್ಪನೇ ಸ್ಕೆಚ್ ಮತ್ತು ವಾದಿಯಿಂದ ಪಡೆದ ಪತ್ರವನ್ನು ಹಾಜರುಪಡಿಸಿದ್ದರು. ಯಾವುದೇ ಸ್ಕೆಚ್ ಮಾಡಿಸಬೇಕಾದರೆ ಹಕ್ಕು ಬದಲಾವಣೆ ಮಾಡಿಕೊಳ್ಳುವವರು ಮತ್ತು ಹಕ್ಕು ಬದಲಾವಣೆ ಮಾಡಿಸಿಕೊಳ್ಳುವವರು ಸಹಿ ಮಾಡಿ ಅರ್ಜಿ ಕೊಡಬೇಕು ಎಂದರೆ ಸರಿ. ಚಿಕ್ಕತಾಯಮ್ಮರವರು ಯಾವತ್ತೂ ಸಹ ಆ ರೀತಿ ಸ್ಕೆಚ್ ಮಾಡಿಸಲು ಅರ್ಜಿ ಕೊಟ್ಟಿಲ್ಲ ಎಂದರೆ ಸುಳ್ಳು.

6. ಕುಟುಂಬದಲ್ಲಿ ಆದ ಮಾತುಕತೆಯಾಗಿದ್ದ ಪಕ್ಷದಲ್ಲಿ ವಾದಿಗೆ ಒಂದೂವರೆ ಗುಂಟೆ ಆಸ್ತಿಗೆ ಕ್ರಯಪತ್ರ ಅಥವಾ ದಾನಪತ್ರದ ಮುಖಾಂತರ ಕೊಡು ಎಂದು ಕೇಳಿರುತ್ತೇನೆ. ಆ ರೀತಿ ನಾನು 2008, 2014 ರಲ್ಲಿ ಕೇಳಿರುತ್ತೇನೆ. ಪಂಚಾಯಿತಿಯಲ್ಲಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡ ನಂತರ ನಾನು ವಾದಿಗೆ ಕ್ರಯಪತ್ರ ಅಥವಾ ದಾನಪತ್ರ ಬರೆದುಕೊಡಬೇಕೆಂದು ಕೇಳಿರುತ್ತೇನೆ. ನನ್ನ ದೊಡ್ಡಪ್ಪ ಖಾತೆ ಮಾಡಿಸಲು ಪಂಚಾಯಿತಿಗೆ ಕೊಟ್ಟ ದಾಖಲೆಗಳನ್ನು ಪಂಚಾಯಿತಿಯಿಂದ ತಂದು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಬೊಂತಗಳ್ಳಿಯಲ್ಲಿ ನನಗೆ ಇನ್ನೊಂದು ನಿವೇಶನ ಇರುತ್ತದೆ. ಅದು ಮೂಲತಃ ನನ್ನ ತಂದೆಯದ್ದು ಎಂದರೆ ಸಾಕ್ಷಿಯು ನನ್ನ ತಾಯಿಯದ್ದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಮೂಲತಃ ನನ್ನ ತಂದೆಯ ಆಸ್ತಿ ಎಂದರೆ ಸುಳ್ಳು. ನನಗೆ ಮನೆ ಇಲ್ಲದೇ ಇದ್ದುದರಿಂದ ತಾಯಿಯ ಹೆಸರಿಗೆ ನೀಡಿರುವ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳುವವರೆಗೆ ನನಗೆ ದಾವಾ ಆಸ್ತಿಯಲ್ಲಿಯ ಮನೆಯನ್ನು ವಾದಿಯು ಅನುಕಂಪದ ಆಧಾರದ ಮೇಲೆ ವಾಸ ಮಾಡಲು ಬಿಟ್ಟು ಕೊಟ್ಟಿದ್ದರು ಎಂದರೆ ಸುಳ್ಳು. ಇವತ್ತಿಗೂ ಸಹ ಅದನ್ನು ಸಂಪೂರ್ಣವಾಗಿ ನಿರ್ಮಾಣ ಮಾಡಿಲ್ಲ ಎಂದರೆ ಸರಿ. ಸದರಿ ಮನೆ ಈಗ ನೋಡುತ್ತಿರುವ ಫೋಟೋದಲ್ಲಿರುವ ಮನೆಯಾಗಿರುತ್ತದೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋವನ್ನು ನಿಪಿ 34

ಎಂದು ಗುರುತಿಸಲಾಯಿತು. ಈ ಮನೆಯನ್ನು ಕಟ್ಟಿಕೊಂಡು ಈ ಮನೆಗೆ ಹೋಗುತ್ತೇವೆ ಎಂದು ಹೇಳುತ್ತಾ ಮುಂದೂಡುತ್ತಾ ಬಂದೆ ಎಂದರೆ ಸುಳ್ಳು. ನಾನು ಅಕ್ರಮವಾಗಿ ಖಾತೆ ಮಾಡಿಕೊಂಡ ವಿಚಾರ ನವೆಂಬರ್ 2021 ವರೆಗೆ ವಾದಿಯ ಗಮನಕ್ಕೆ ಬಂದಿರಲಿಲ್ಲ ಎಂದರೆ ಸುಳ್ಳು. ಆ ವಿಚಾರ ಅವರಿಗೆ ಗೊತ್ತಾದ ನಂತರ ಹಲವಾರು ಬಾರಿ ವಾದಿಯು ನನಗೆ ಅದನ್ನು ರದ್ದುಗೊಳಿಸಿ ಕೊಡಿ ಎಂದು ಕೇಳಿದರು ಎಂದರೆ ಸುಳ್ಳು.

7. ನಾನು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣದಲ್ಲಿ ಓ.ಎಸ್.ನಂ.77/2024 ದಾವೆಯನ್ನು ವಾದಿಯು ಈ ದಾವೆಯನ್ನು ಸಲ್ಲಿಸಿದ ಒಂದು ವರ್ಷದ ನಂತರ ಸಲ್ಲಿಸಿರುತ್ತೇನೆ. ಈ ಕೇಸಿನಲ್ಲಿ ನನಗೆ ತೊಂದರೆಯಾಗುತ್ತದೆ ಎಂದು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯ ವಿರುದ್ಧ ಆ ಕೇಸನ್ನು ಹಾಕಿರುತ್ತೇನೆ ಎಂದರೆ ಸುಳ್ಳು. ಹಕ್ಕನ್ನು ರುಜುವಾತುಪಡಿಸುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ರಾಜಕೀಯವಾಗಿ ಬಲಾಡ್ಯನಿರುವುದರಿಂದ ಪಂಚಾಯಿತಿ ದಲಅಧಿಕಾರಿಗಳೊಂದಿಗೆ ಷರೀಕ್ಕಾಗಿ ದಾಖಲೆಗಳನ್ನು ನನ್ನ ಹೆಸರಿಗೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡಿದ್ದು, ಮತ್ತು ವಿದ್ಯುತ್ ಸಂಪರ್ಕ ಪಡೆದುಕೊಂಡಿರುವುದು ವಾದಿಯ ಹಕ್ಕಿಗೆ ಬದ್ಧಪಡಿಸಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ವಾದಿಯ ಹೆಸರಿಗೆ ಹಕ್ಕಿನ ದಾಖಲೆಗಳು ಮುಂದುವರೆಯುತ್ತಾ ಬರುತ್ತಿರುವುದರಿಂದ ವಾದಿ ಮಾತ್ರ ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ**</u> ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ